# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/2307/2022
ಪಿಓ–ಎಆರ್‌ಇ–1 : ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 15/04/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸು ವರದಿ

**ವಿಷಯ: 1) ಶ್ರೀ ಸಿ.ಪುಟ್ಟಸ್ವಾಮಿ, ಪೌರಾಯುಕ್ತರು, ನಗರಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ.**
**2) ಶ್ರೀ ಟಿ.ಎಸ್. ಮೋಹನ್ ಕುಮಾರ್, ದ್ವಿತೀಯ ದರ್ಜೆ ಸಹಾಯಕ, ನಗರಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ –** ಆದ ಇವರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು

----

ಪೊಲೀಸ್ ಇನ್ಸ್‌ಪೆಕ್ಟರ್, ಅಂದಿನ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ರಾಮನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **1) ಶ್ರೀ ಸಿ.ಪುಟ್ಟಸ್ವಾಮಿ, ಪೌರಾಯುಕ್ತರು, ನಗರಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ. 2) ಶ್ರೀ ಟಿ.ಎಸ್. ಮೋಹನ್ ಕುಮಾರ್, ದ್ವಿತೀಯ ದರ್ಜೆ ಸಹಾಯಕ, ನಗರಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ.** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರನ್ನು ದೂರುದಾರರಾದ **ಶ್ರೀ ಪಯಾಜ್ ಅಹ್ಮದ್, ಬಿನ್ ಬುರಾನುದ್ದಿನ್, ವಾಸ: ನಂ: 975/1, ವಾರ್ಡ್ ನಂ: 22, ಉಪ್ಪರ್ ಡೇರಾ, ಚನ್ನಪಟ್ಟಣ ಟೌನ್** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ :** ದೂರುದಾರರು ತಮ್ಮ ದೂರಿನಲ್ಲಿ, ತನ್ನ ತಂದೆ ಶ್ರೀ ಬುರಾನುದ್ದಿನ್ ರವರು, ನಂ: 975/1, ವಾರ್ಡ್ ನಂ: 22, ಉಪ್ಪರ್ ಡೇರಾ, ಚನ್ನಪಟ್ಟಣ ಆಸ್ತಿಯನ್ನು 1987 ರಲ್ಲಿ ಖರೀದಿ ಮಾಡಿದ ವೇಳೆಯಿಂದ ಇಲ್ಲಿಯವರೆಗೆ, ತನ್ನ ತಂದೆಯ ಹೆಸರಿನಲ್ಲಿ ನಗರಸಭೆ ಖಾತೆ ಸಂ: 1270 ರಲ್ಲಿ ಬರುತ್ತಿದ್ದು, ಹಾಗೂ ಸ್ವಾಧೀನ ಅನುಭವದಲ್ಲಿದ್ದು, ಸದರಿ ಆಸ್ತಿಯ ಅಳತೆ ತಿದ್ದುಪಡಿ ಮಾಡಿ ಇ–ಖಾತೆ ಮಾಡಿಕೊಡುವ ಬಗ್ಗೆ ಪೌರಾಯುಕ್ತರು, ನಗರಸಭೆ ಚನ್ನಪಟ್ಟಣ ರವರಿಗೆ ದಿ: 01/03/2019 ರಂದು ಅರ್ಜಿಯನ್ನು ದೂರುದಾರರು, ತನ್ನ ತಂದೆಯ ಹೆಸರಿನಲ್ಲಿ ಹಾಕಿದ್ದು, ತನ್ನ ತಂದೆಗೆ ಸುಮಾರು 65 ವರ್ಷ ವಯಸ್ಸಾಗಿದ್ದ ಕಾರಣ, ದೂರುದಾರರು ನಗರಸಭೆಯ ಕೆಲಸಕ್ಕೆ ಓಡಾಡುತ್ತಿದ್ದು, ಖಾತೆ ಮಾಡಿಕೊಡಲು ಸತಾಯಿಸುತ್ತಿದ್ದಾಗ, ದೂರುದಾರರು ಮತ್ತು ಅವರ ದೊಡ್ಡಪ್ಪನ ಮಗ ಶ್ರೀ ಎಸ್.ಎಂ.ಸಿದ್ದಿಕ್, ಇಬ್ಬರು, 2ನೇ

ಎದುರುದಾರರನ್ನು 03 ತಿಂಗಳ ಹಿಂದೆ ಭೇಟಿ ಮಾಡಿದಾಗ, ಸದರಿಯವರು ರೂ.5000/- ಗಳ ಲಂಚ ಕೊಡುವಂತೆ ಕೇಳಿದ್ದು, ದೂರುದಾರರು ರೂ 5000/- ಗಳನ್ನು 2ನೇ ಎದುರುದಾರರಿಗೆ ಕೊಟ್ಟಿರುತ್ತಾರೆ.

3. ತದನಂತರ, 2ನೇ ಎದುರುದಾರರು ದೂರುದಾರರಿಗೆ 1ನೇ ಎದುರುದಾರರ ಜೊತೆ ಮಾತನಾಡುವಂತೆ ತಿಳಿಸಿದಾಗ, ದಿ: 24/04/2019 ರಂದು ದೂರುದಾರರು ಮತ್ತು ಎಸ್.ಎಂ.ಸಿದ್ದಿಕ್ ರವರು ಸಂಜೆ 07-00 ಗಂಟೆಯಲ್ಲಿ ನಗರಸಭೆಯ ಪಾರ್ಕಿಂಗ್ ಜಾಗದಲ್ಲಿ, 1ನೇ ಎದುರುದಾರ ರವರನ್ನು ಭೇಟಿ ಮಾಡಿ ಮಾತನಾಡಿದಾಗ, ಫೈಲ್ ರೆಡಿ ಇದೆ ಅಪ್ರೂವಲ್ ಮಾಡಿದ್ದೀನಿ, ಶ್ರೀ ಡಿ.ಪ್ರಶಾಂತ ಮತ್ತು 2ನೇ ಎದುರುದಾರರ ಹತ್ತಿರ ಮಾತನಾಡುವಂತೆ ತಿಳಿಸಿದ್ದು, ಸದರಿ ಸಂಭಾಷಣೆಯನ್ನು ಶ್ರೀ ಎಸ್.ಎಂ.ಸಿದ್ದಿಕ್ ರವರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ರೆಕಾರ್ಡಿಂಗ್ ಮಾಡಿರುತ್ತಾರೆ.

4. ಅದರಂತೆ, ಸದರಿಯವರು ಶ್ರೀ ಡಿ.ಪ್ರಶಾಂತರವರನ್ನು ಮಾತನಾಡಿಸಿದಾಗ, 1ನೇ ಎದುರುದಾರರು ರೂ.25000/- ಗಳನ್ನು ಕೇಳುವಂತೆ ಹೇಳಿರುವುದಾಗಿ ದೂರುದಾರರಿಗೆ ಹೇಳಿದ್ದು, ಅದರಂತೆ ದೂರುದಾರರು 02 ಕಂತಿನಲ್ಲಿ ರೂ.25000/- ಗಳನ್ನು 1ನೇ ಎದುರುದಾರರಿಗೆ ಕೊಡಲು, ಅನಿಲ್ ರವರಿಗೆ ಕೊಟ್ಟಿರುತ್ತಾರೆ. ಅದಾದ ನಂತರ ದಿ: 29/04/2019 ರಂದು ಇ-ಖಾತೆ ಕೊಟ್ಟಿರುತ್ತಾರೆ.

5. ಇ-ಖಾತೆಯಲ್ಲಿ ಖರೀದಿ ಪತ್ರದಲ್ಲಿರುವ ವಿಸ್ತೀರ್ಣಕ್ಕಿಂತ ಕಡಿಮೆ ಬರುತ್ತಿದ್ದ ಕಾರಣ, ವಿಸ್ತೀರ್ಣ ತಿದ್ದುಪಡಿ ಮಾಡಲು ನಗರಸಭೆಗೆ ದೂರುದಾರರು ಅರ್ಜಿ ಹಾಕಿಕೊಂಡಿದ್ದು, ನಂತರ ದೂರುದಾರರು ಮತ್ತು ಇವರ ದೊಡ್ಡಪ್ಪನ ಮಗ ಎಸ್.ಎಂ.ಸಿದ್ದಿಕ್ ಇಬ್ಬರು ಹಲವಾರು ಬಾರಿ 2ನೇ ಎದುರುದಾರರನ್ನು ಭೇಟಿ ಮಾಡಿ, ಖಾತೆಯಲ್ಲಿ ವಿಸ್ತೀರ್ಣ ತಿದ್ದುಪಡಿ ಮಾಡಿಕೊಡಲು ಕೇಳಿಕೊಂಡಾಗ, 2ನೇ ಎದುರುದಾರರು ಮತ್ತೇ ರೂ.5,000/- ಗಳನ್ನು ಕೇಳಿ, ಕಳೆದ ಏಪ್ರೀಲ್ ತಿಂಗಳಲ್ಲಿ ರೂ.5,000/- ಗಳನ್ನು ಪಡೆದುಕೊಂಡು ಕೆಲಸ ಬಾಕಿ ಇಟ್ಟುಕೊಂಡಿದ್ದು, ನಂತರ ಇಬ್ಬರು ಹೋಗಿ 2ನೇ ಎದುರುದಾರರನ್ನು ಕೇಳಲಾಗಿ, 1ನೇ ಎದುರುದಾರರನ್ನು ಮತ್ತೆ ಭೇಟಿ ಮಾಡುವಂತೆ ಹೇಳಿದ್ದ ಮೇರೆಗೆ, 2-3 ಬಾರಿ, 1ನೇ ಎದುರುದಾರರನ್ನು ಭೇಟಿ ಮಾಡಿದ್ದು, ದಿ: 28/06/2019 ರಂದು ಸಂಜೆ ಸುಮಾರು 06-45 ಗಂಟೆಯ ಸಮಯದಲ್ಲಿ ದೂರುದಾರರು ಮತ್ತು ಶ್ರೀ ಎಸ್.ಎಂ.ಸಿದ್ದಿಕ್ ಇಬ್ಬರು ನಗರಸಭೆಯಲ್ಲಿ 1ನೇ ಎದುರುದಾರರನ್ನು ಭೇಟಿ ಮಾಡಿದಾಗ, ದೂರುದಾರರು ತನ್ನ ಮೊಬೈಲ್‌ನಲ್ಲಿ ಆಡಿಯೋ ರೇಕಾರ್ಡಿಂಗ್ ಆನ್ ಮಾಡಿಕೊಂಡು ಹೋಗಿದ್ದು, 1ನೇ ಎದುರುದಾರರು ತಿದ್ದುಪಡಿ ಖಾತೆ ಮಾಡಿಕೊಡಲು ಶ್ರೀ ಎಸ್.ಎಂ.ಸಿದ್ದಿಕ್ ರವರ ಜೊತೆ ಮಾತನಾಡುತ್ತಾ, ರೂ.10,000/- ಗಳನ್ನು ಕೊಡುವಂತೆ ಕೇಳಿದ್ದು, ಮತ್ತೇ ಪಾರ್ಕಿಂಗ್ ಸ್ಥಳಕ್ಕೆ ಬಂದು ತಮ್ಮ ಮೊಬೈಲ್ ತೋರಿಸಿ, 20 ಅಂತ ಟೈಪ್ ಮಾಡಿ ರೂ.20,000/- ಗಳನ್ನು ಕೊಡುವಂತೆ ಲಂಚಕ್ಕೆ ಒತ್ತಾಯಿಸಿದ್ದು, ಆಗ ಶ್ರೀ ಎಸ್.ಎಂ.ಸಿದ್ದಿಕ್ ರವರು 20 ಸಾವಿರನಾ ಅಂತ ಕೇಳಿರುತ್ತಾರೆ. ಆಗ 1ನೇ ಎದುರುದಾರರು ಈಗಲೇ ದುಡ್ಡು ತರಿಸುವಂತೆ ಒತ್ತಾಯಿಸಲಾಗಿ, ಶ್ರೀ ಎಸ್.ಎಂ.ಸಿದ್ದಿಕ್ ದೂರುದಾರರಿಗೆ ಈಗ ಎಷ್ಟು ಅಡ್ಜೆಸ್ಟ್ ಅಗುತ್ತೆ ಎಂದು ಕೇಳಿದಾಗ, ರೂ 5000/- ಅಗುತ್ತೆ ಎಂದು ಮನೆಗೆ ಹೋಗಿ ಬರುತ್ತೇನೆಂದು ಹೇಳಿದಾಗ, 1ನೇ ಎದುರುದಾರರು ತಮ್ಮ ಕಾರಿನಲ್ಲಿ ಕುಳಿತುಕೊಂಡಿದ್ದು, ಶ್ರೀ ಎಸ್.ಎಂ.ಸಿದ್ದಿಕ್ ಎಲ್ಲಿಗೆ ಬರಬೇಕು ಅಂತ ಕೇಳಿದಾಗ, ಚನ್ನಪಟ್ಟಣ ರಿಲೆಯನ್ಸ್ ಪೆಟ್ರೋಲ್ ಬಂಕ್ ಹತ್ತಿರ ಬರುವಂತೆ ಹೇಳಿರುತ್ತಾರೆ. ಸದರಿ ಸಂಭಾಷಣೆಯನ್ನು ದೂರುದಾರರು ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿರುತ್ತಾರೆ.

6. ನಂತರ, ದೂರುದಾರರು ಮನೆಗೆ ಹೋಗಿ ರೂ. 5000/- ಗಳ ಹಣವನ್ನು ತೆಗೆದುಕೊಂಡು, ಶ್ರೀ ಎಸ್.ಎಂ.ಸಿದ್ದಿಕ್ ಜೊತೆಗೆ ಚನ್ನಪಟ್ಟಣ ರಿಲೆಯನ್ಸ್ ಪೆಟ್ರೋಲ್ ಬಂಕ್ ಬಳಿ ಸುಮಾರು ಸಂಜೆ 07-00 ಗಂಟೆಯಲ್ಲಿ, 1ನೇ ಎದುರುದಾರರನ್ನು ಭೇಟಿ ಮಾಡಿದಾಗ, 1ನೇ ಎದುರುದಾರರು ಎಷ್ಟಿದೆ ಅಂತ ಕೇಳಿದ್ದು, ಶ್ರೀ ಎಸ್.ಎಂ.ಸಿದ್ದಿಕ್ ರವರು 5000/- ಅಡ್ಜೆಸ್ಟ್ ಆಗಿರುವುದಾಗಿ ಹೇಳಿ, ರೂ 5000/- ಗಳನ್ನು ಶ್ರೀ ಎಸ್.ಎಂ.ಸಿದ್ದಿಕ್ ರವರು ದೂರುದಾರರ ಕಡೆಯಿಂದ ಪಡೆದುಕೊಂಡು, 1ನೇ ಎದುರುದಾರರಿಗೆ ಕೊಟ್ಟಿದ್ದು, ಉಳಿದ ಹಣ 15,000/- ರೂ. ಬೇಗ ಕೊಡುವಂತೆ ಒತ್ತಾಯಿಸುತ್ತಾರೆ. ಈ ಸಂಭಾಷಣೆಯನ್ನು ಸಹ ದೂರುದಾರರು ತನ್ನ ಮೊಬೈಲ್‌ನಲ್ಲಿ ಆಡಿಯೋ ರೆಕಾರ್ಡಿಂಗ್ ಮಾಡಿರುತ್ತಾರೆ. ದೂರುದಾರರು ಎದುರುದಾರರುಗಳಿಗೆ ಹೆಚ್ಚಿನ ಲಂಚದ ಹಣ ನೀಡಲು ಇಷ್ಟವಿಲ್ಲದ ಪ್ರಯುಕ್ತ, ದಿ: 02/07/2019 ರಂದು ದೂರನ್ನು ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ರಾಮನಗರ, ಇವರಲ್ಲಿ ನೀಡಿದ್ದು, ಸದರಿ ದೂರು ಮೊ.ಸಂಖ್ಯೆ: 08/2019 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ಕಲಂ 7(ಎ)ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

7. ದಿನಾಂಕ: 02/07/2019 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಎಸ್.ಪುಟ್ಟವೀರಯ್ಯ, ಪಂಚ-1, ಶ್ರೀ ರಾಜ ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ನಂತರ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 15,000/- (ಹಣದ ಡಿನಾಮಿನೇಷನ್ 2000/- x 2, 500/- x 22) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಆಡಿಯೋ ಮತ್ತು ವಿಡಿಯೋ ಸಂಭಾಷಣೆ ದಾಖಲಾಗಿದ್ದ ಆಡಿಯೋ ಮತ್ತು ವಿಡಿಯೋ ಹಾಜರುಪಡಿಸಿರುತ್ತಾರೆ. ಪಂಚ-02ರವರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಅದನ್ನು ಪೊಲೀಸ್ ಸಿಬ್ಬಂದಿ ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ, ಪಂಚ-1 ರವರು ದೂರುದಾರರ ಪ್ಯಾಂಟಿನ, ಶರ್ಟಿನ, ಜೇಬುಗಳನ್ನು ಪರಿಶೀಲಿಸಿದ ನಂತರ, ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ, ಪಂಚ-2 ರವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 15 ಸಾವಿರ ರೂ.ಗಳ ಹಣವನ್ನು ಎಣಿಸಿ, ದೂರುದಾರರ ಧರಿಸಿದ ಶರ್ಟಿನ ಎಡಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ, ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತಮ್ಮ ಕೈಗಳಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಸೂಚನೆಯನ್ನು ತನಿಖಾಧಿಕಾರಿಯವರಿಗೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ತನಿಖಾಧಿಕಾರಿ ಪಂಚ-1 ರವರಿಗೆ ಸೂಚನೆ ನೀಡಿ, ಪಂಚ-1 ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿನಾಂಕ: 02/07/2019 ರಂದು ಮಧ್ಯಾಹ್ನ: 1.00 ರಿಂದ ಮಧ್ಯಾಹ್ನ 3.45 ಗಂಟೆಯವರೆಗೆ ಮಾಡಿರುತ್ತಾರೆ.

8. ದಿನಾಂಕ: 02/07/2019 ರಂದು ತನಿಖಾಧಿಕಾರಿಯವರು, ದೂರುದಾರರನ್ನು ಮತ್ತು ಪಂಚರನ್ನು ಸಿಬ್ಬಂದಿಯನ್ನು ಬರಮಾಡಿಕೊಂಡು, ಸಂಜೆ 4.25ರ ವೇಳೆಗೆ ಚನ್ನಪಟ್ಟಣ ಟೌನ್ ಟಿ.ಡಿ ರಾಮು ಸರ್ಕಲ್ ಸಮೀಪ ಬಂದಿರುತ್ತಾರೆ. ನಂತರ, ತನಿಖಾಧಿಕಾರಿ ವಾಯ್ಸ್ ರೆಕಾರ್ಡ್‌ರ್ ನ್ನು ದೂರುದಾರರಿಗೆ ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿ, ದೂರುದಾರರನ್ನು ಹಾಗೂ ಪಂಚ-1 ರವರನ್ನು ಜೊತೆ ಮಾಡಿ 1ನೇ ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ನಂತರ, ದೂರುದಾರರು ಎದುರುದಾರರ ಕಾರ್ಯಾಲಯಕ್ಕೆ ಹೋಗಿ, ಅಲ್ಲಿ ಸಿಬ್ಬಂದಿಯನ್ನು ವಿಚಾರಿಸಲಾಗಿ, 1ನೇ ಎದುರುದಾರರು ರಾಮನಗರ ಡಿ.ಸಿ. ಕಛೇರಿಗೆ ಮೀಟಿಂಗ್‌ಗೆ ಹೋಗಿ, ಸಂಜೆ 6.00 ಗಂಟೆಗೆ ಬರುವುದಾಗಿ ಮಾಹಿತಿ ಪಡೆದು, ನಂತರ, ಸದರಿ ವಿಚಾರವನ್ನು ತನಿಖಾಧಿಕಾರಿಗೆ ದೂರುದಾರರು ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿದ್ದಿಕ್ ರವರು 1ನೇ ಎದುರುದಾರರ ಮೊಬೈಲ್ ನಂಬರ್ 9141757722 ಗೆ ಕರೆ ಮಾಡಿ, ಲೌಡ್ ಸ್ಪೀಕರ್ ಆನ್ ಮಾಡಿ ಮಾತನಾಡಿದಾಗ, 1ನೇ ಎದುರುದಾರರು ತಾನು ಕಛೇರಿಗೆ ಬರುವುದಿಲ್ಲ, ನಾಳೆ 10.00 ಗಂಟೆಗೆ ಬರುವಂತೆ ಹೇಳಿರುತ್ತಾರೆ. ಅದರಂತೆ, ತನಿಖಾಧಿಕಾರಿಯು ಸಿಬ್ಬಂದಿಯನ್ನು ಹಾಗೂ ದೂರುದಾರರನ್ನು, ಮತ್ತು ಪಂಚರನ್ನು ಕರೆದುಕೊಂಡು ರಾತ್ರಿ 7.05 ಗಂಟೆಗೆ ಎ.ಸಿ.ಬಿ ಕಛೇರಿಗೆ ವಾಪಸ್ಸು ಬಂದು, ಆ ಸಂಬಂಧ ಪಂಚರ ಸಮಕ್ಷಮ ಪ್ರಕ್ರಿಯೆ ನಂತರ ಪಂಚನಾಮೆಯನ್ನು ಬರೆದಿರುತ್ತಾರೆ.

9. ದಿನಾಂಕ: 3/7/2019 ರಂದು ತನಿಖಾಧಿಕಾರಿಯು ದೂರುದಾರರನ್ನು ಪಂಚರನ್ನು ಮತ್ತು ಸಿಬ್ಬಂದಿಯವರನ್ನು ಕಛೇರಿಗೆ ಬರಮಾಡಿಕೊಂಡು, ದಿ: 2/7/2019 ರ ಪ್ರಾಯೋಗಿಕ ಪಂಚನಾಮೆಯ ಅಂಶವನ್ನು ಪುನರ್ ಮನನ ಮಾಡಿಕೊಟ್ಟು, ಪ್ರಕ್ರಿಯೆಯನ್ನು ಪುನರಾವರ್ತಿಸಿ, ಆ ಸಂಬಂಧವಾಗಿ ಮುಂದುವರೆದ ಪ್ರಾಯೋಗಿಕ ಪಂಚನಾಮೆಯನ್ನು ದಿ: 3/7/2019 ಬೆಳಿಗ್ಗೆ 8.45 ರಿಂದ ಬೆಳಿಗ್ಗೆ 9.45 ರವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

10. ಅದೇ ದಿನ ದಿನಾಂಕ: 3/7/2019 ರಂದು ತನಿಖಾಧಿಕಾರಿ ದೂರುದಾರರನ್ನು, ಪಂಚರನ್ನು, ಮತ್ತು ಸಿಬ್ಬಂದಿಯನ್ನು ಕರೆದುಕೊಂಡು, ಬೆಳಿಗ್ಗೆ 10.20 ಕ್ಕೆ ಚನ್ನಪಟ್ಟಣ ನಗರಸಭೆ ಎಂ.ಜಿ.ರಸ್ತೆಯ ಹತ್ತಿರ ಬಂದಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ಮತ್ತು ಪಂಚ-1 ರವರಿಗೆ ಮತ್ತೊಮ್ಮೆ ಪ್ರಾಯೋಗಿಕ ಪಂಚನಾಮೆಯ ಅಂಶವನ್ನು, ಪುನರ್ ಮನನ ಮಾಡಿಕೊಟ್ಟು, 1ನೇ ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ಅದರಂತೆ, ದೂರುದಾರರು, ಪಂಚ-1 ರವರ ಜೊತೆ, 1ನೇ ಎದುರುದಾರರನ್ನು ಭೇಟಿ ಮಾಡಲು ಹೋದಾಗ, ಕೊಠಡಿಯಲ್ಲಿ ಸಾರ್ವಜನಿಕರು ಇದ್ದುದರಿಂದ, ಅವರು ಹೋಗುವವರೆಗೂ ಸುಮಾರು ಅರ್ಧ ಗಂಟೆ ಕಾಲ ಕೊಠಡಿ ಹತ್ತಿರ ಕಾಯುತ್ತಾ ನಿಂತಿದ್ದು, ನಂತರ, 1ನೇ ಎದುರುದಾರರನ್ನು ದೂರುದಾರರು ಭೇಟಿ ಮಾಡಿ, ಕೆಲಸದ ಬಗ್ಗೆ ವಿಚಾರಿಸಿದಾಗ, 1ನೇ ಎದುರುದಾರರು 2ನೇ ಎದುರುದಾರರನ್ನು ಕರೆಯುವಂತೆ ತಿಳಿಸಿದ ಮೇರೆಗೆ, ಸಿದ್ದಿಕ್ ರವರು 2ನೇ ಎದುರುದಾರರನ್ನು ಕರೆದುಕೊಂಡು 1ನೇ ಎದುರುದಾರರ ಕೊಠಡಿಗೆ ಬಂದಾಗ, 1ನೇ ಎದುರುದಾರರು 2ನೇ ಎದುರುದಾರರನ್ನು, ದೂರುದಾರರ ಕೆಲಸದ ಬಗ್ಗೆ ವಿಚಾರಿಸಿದಾಗ, 2ನೇ ಎದುರುದಾರರು ಆರ್.ಐ ರವರಿಗೆ ಸ್ಥಳ ಪರಿಶೀಲನೆ ಮಾಡಲು ಕೊಟ್ಟಿರುವುದಾಗಿ, ತಿಳಿಸಿರುತ್ತಾರೆ. ನಂತರ, 1ನೇ ಎದುರುದಾರರು ಕೈ ಸನ್ನೆ ಮೂಲಕ

ದೂರುದಾರರನ್ನು ಲಂಚದ ಹಣದ ಬಗ್ಗೆ ಕೇಳಿದಾಗ, ದೂರುದಾರರು ಹಣ ತಂದಿರುವುದಾಗಿ ಹೇಳಿದಾಗ, 1ನೇ ಎದುರುದಾರರು 2ನೇ ಎದುರುದಾರರನ್ನು ಮತ್ತೆ ಕೊಠಡಿಗೆ ಕರೆಸಿರುತ್ತಾರೆ. ನಂತರ, 1ನೇ ಎದುರುದಾರರು, 2ನೇ ಎದುರುದಾರರನ್ನು ಕುರಿತು ದೂರುದಾರರಿಂದ ಹಣವನ್ನು ಪಡೆದುಕೊಳ್ಳುವಂತೆ ಸೂಚಿಸಿದರು. ಅದರಂತೆ, 2ನೇ ಎದುರುದಾರರು ತಮ್ಮ ಕೊಠಡಿಗೆ ಹೋದ ನಂತರ, ದೂರುದಾರರು 2ನೇ ಎದುರುದಾರರ ಕೊಠಡಿಗೆ ಹೋಗಿ, 1ನೇ ಎದುರುದಾರರು ತಿಳಿಸಿದಂತೆ, ಹಣವನ್ನು ಪಡೆಯುವಂತೆ ಕೇಳಿಕೊಂಡಾಗ, ಪೈಲ್ ಕ್ಲಿಯರ್ ಆಗಲಿ ಪಡೆದುಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ ಹಾಗೂ ಆರ್.ಐ ಜೊತೆ ಮಾತನಾಡಿಕೊಂಡು ಬರಲು ತಿಳಿಸಿರುತ್ತಾರೆ. ಅದರಂತೆ, ದೂರುದಾರರು ಆರ್.ಐ ಕೊಠಡಿಗೆ ಹೋಗಿ, ಶ್ರೀಮತಿ ವಿಜಯರತ್ನ ರವರನ್ನು ಭೇಟಿಯಾಗಿ, ಆಸ್ತಿ ವಿಸ್ತೀರ್ಣ ತಿದ್ದುಪಡಿ ಬಗ್ಗೆ ಕೇಳಿದಾಗ, ಸ್ಥಳ ಪರಿಶೀಲನೆಗಾಗಿ 1ನೇ ಎದುರುದಾರರ ಜೊತೆ ಬರುವುದಾಗಿ ತಿಳಿಸಿರುತ್ತಾರೆ. ನಂತರ, ದೂರುದಾರರು ಸುಮಾರು 1.30ರ ಗಂಟೆ ಸಮಯದಲ್ಲಿ, 1ನೇ ಮಹಡಿಯ ಕೆಳಗೆ ಇರುವ ನಗರಸಭೆ ಹಿಂಭಾಗಕ್ಕೆ ಹೋಗಿ, ಒಬ್ಬ ವ್ಯಕ್ತಿಯ ಜೊತೆ ಮಾತನಾಡಿ, ನಂತರ ದೂರುದಾರರು ತನ್ನ ಶರ್ಟ್ ಜೇಬಿನಿಂದ ಫಿನಾಪ್ತಲಿನ್ ಪೌಡರ್ ಹಣವನ್ನು ತೆಗೆದಿದ್ದು, ಸದರಿ ಹಣವನ್ನು ಎಸ್.ಎಂ.ಸಿದ್ದಿಕ್ ರವರು ಪಡೆದು, ಎದುರು ನಿಂತಿದ್ದ ವ್ಯಕ್ತಿಗೆ ಹಣವನ್ನು ಕೊಟ್ಟಾಗ, ಸದರಿ ವ್ಯಕ್ತಿಯು ಹಣವನ್ನು ತಮ್ಮ ಬಲಗೈಯಿಂದ ಪಡೆದು, ಎಣಿಸಿ ಪ್ಯಾಂಟಿನ ಬಲಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಸಮಯ ಮಧ್ಯಾಹ್ನ 1.40 ಆಗಿರುತ್ತದೆ. ನಂತರ, ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ನೀಡಿರುತ್ತಾರೆ. ಸೂಚನೆಯನ್ನು ಅನುಸರಿಸಿ, ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ ತನ್ನಿಂದ ಲಂಚದ ಹಣ ರೂ. 15000/- ಗಳನ್ನು ಪಡೆದ ವ್ಯಕ್ತಿ ಇವರೇ ಎಂದು ಶ್ರೀ ಡಿ.ಪ್ರಶಾಂತ ಇವರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ, ತನಿಖಾಧಿಕಾರಿಯು ಶ್ರೀ ಡಿ.ಪ್ರಶಾಂತರವರು ತನ್ನನ್ನು ಪರಿಚಯಿಸಿಕೊಂಡು, ತನಿಖೆ ಪ್ರಾರಂಭಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರು ಶ್ರೀ ಡಿ.ಪ್ರಶಾಂತ ರವರನ್ನು ಕರೆದುಕೊಂಡು, 1ನೇ ಎದುರುದಾರರ ಕೊಠಡಿಗೆ ಬಂದು, 1ನೇ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡಿರುತ್ತಾರೆ. ಹಾಗೆಯೇ ಪಕ್ಕದ ಕೊಠಡಿಯಲ್ಲಿದ್ದ 2ನೇ ಎದುರುದಾರರನ್ನು ತನಿಖಾಧಿಕಾರಿಯು ತಾವಿದ್ದಲ್ಲಿಗೆ ಕರೆಸಿಕೊಂಡು, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿಯು ಶ್ರೀ ಡಿ.ಪ್ರಶಾಂತ ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ಗುಲಾಬಿ ಬಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯವರು ಶ್ರೀ ಡಿ.ಪ್ರಶಾಂತನನ್ನು ಲಂಚದ ಹಣದ ಬಗ್ಗೆ ವಿಚಾರಿಸಿದಾಗ, ಲಂಚದ ಹಣವನ್ನು ತನ್ನ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟಿರುವುದಾಗಿ ತಿಳಿಸಿದ ಮೇರೆಗೆ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು ಲಂಚದ ಹಣವನ್ನು ತೆಗೆದು ಅದರ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿ, ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ಹಣಕ್ಕೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಸಿಬ್ಬಂದಿ ಶ್ರೀ ಡಿ.ಪ್ರಶಾಂತ ರವರ ಪ್ಯಾಂಟಿನ ಬಲಭಾಗದ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯು, ಸದರಿ ಪ್ಯಾಂಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿ 1ನೇ ಎದುರುದಾರರ ಅಂಗ ಶೋಧನೆ ಮಾಡಿದಾಗ, ಅವರ ಪ್ಯಾಂಟ್ ಜೇಬಿನಲ್ಲಿದ್ದ ಪರ್ಸ್‌ನಲ್ಲಿ 9120/- ರೂ. ಹಾಗೂ ಶರ್ಟ್ ಜೇಬಿನಲ್ಲಿ ಮುಯ್ಯಿ ಕವರ್ ನಲ್ಲಿ 2000/- ಮುಖ ಬೆಲೆಯ 5 ನೋಟುಗಳು, ಒಟ್ಟು 10,000/- ಹಾಗೂ

ಇತರೆ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡು, ಸದರಿ ಹಣಕ್ಕೆ ಸೂಕ್ತ ಸಮಜಾಯಿಷಿ ನೀಡದೆ ಇದ್ದ ಪ್ರಯುಕ್ತ, ತನಿಖಾಧಿಕಾರಿಯವರು ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು 2ನೇ ಎದುರುದಾರರ ಪ್ಯಾಂಟಿನ ಜೇಬಿನಲ್ಲಿ 4160/- ರೂ. ಮುಯ್ಯಿ ಕವರ್ ನಲ್ಲಿ 500 ಮುಖ ಬೆಲೆಯ 6 ನೋಟುಗಳು ದೊರೆತಿದ್ದವು, ಸದರಿ ಹಣಕ್ಕೆ ಸಮಜಾಯಿಷಿ ನೀಡದೆ ಇದ್ದ ಪ್ರಯುಕ್ತ, ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು 1 ಮತ್ತು 2ನೇ ಎದುರುದಾರರನ್ನು ಹಾಗೂ ಶ್ರೀ ಡಿ.ಪ್ರಶಾಂತ ರವರನ್ನು ಕುರಿತು ಸಮಜಾಯಿಷಿ ನೀಡುವಂತೆ ಕೇಳಿದಾಗ, ಲಿಖಿತ ಸಮಜಾಯಿಷಿಯನ್ನು 1ನೇ ಎದುರುದಾರರು ಈ ಕೆಳಕಂಡಂತೆ ನೀಡಿರುತ್ತಾರೆ.

**"ಬಿಳಿ ಶರ್ಟಿನ ವ್ಯಕ್ತಿ ದಿ: 28/06/2019 ರಂದು (ಹೆಸರು ಗೊತ್ತಿಲ್ಲ) ಮತ್ತೊಬ್ಬ ವ್ಯಕ್ತಿ ಅವರ ಜೊತೆ ಇದ್ದವರು ಸಂಜೆ ಸುಮಾರು 04-30ರ ಸಮಯದಲ್ಲಿ ಮೋಹನ್ ಎಸ್.ಡಿ.ಎ ರವರ ಜೊತೆ ಬಹಳ ಜೋರಾಗಿ ಗಲಾಟೆ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ಚೇಂಬರ್‌ಗೆ ಬಂದರು ನಾನು ಅವರಿಗೆ ಈ ರೀತಿ ಗಲಾಟೆ ಬೇಡ, ಅದೇನಿದೆ ಕಡತದೊಂದಿಗೆ ಮಂಡಿಸಲು ಸೂಚಿಸಿದೆ. ನಂತರ ಸಂಜೆ ಕೆಲಸ ಮುಗಿಸಿ ಹೊರ ಹೋಗುವಾಗ ಸುಮಾರು 06-30 ಗಂಟೆಗೆ ನಾನು ಕಾರಿನಲ್ಲಿ ತೆರಳುವಾಗ ಬಿಳಿ ಶರ್ಟಿನ ವ್ಯಕ್ತಿ ಕಾರಿನ ಕಿಟಕಿ ಹತ್ತಿರ ಬಂದು ಖಾತೆ ಬಗ್ಗೆ ಮಾತನಾಡಿ ಸಿಕ್ತಿನಿ ಸಾರ್, ಅದೇನು ನೋಡುತ್ತಿನಿ ಎಂದು ಹೇಳಿ ಹೋದರು. ಮತ್ತೆ ಕಾಲ್ ಮಾಡಿ ಸರ್ ಒಂದು ನಿಮಿಷ ಸಿಕ್ಕಿ ಎಂದರು. ನಾನು ಹೋಗುವ ಹಾದಿಯಲ್ಲಿ ಬಂದು ಸಿಕ್ಕಿ ಆ ಕೆಲಸ ಮಾಡಿ ಎಂದರು. ನಾನು ರಿಪೋಟ್ ಬರಲಿ ಎಂದು ಹೇಳಿ ಹೊರಟೆ. ಅದೇ ವ್ಯಕ್ತಿ ಎದ್ದು ಬಂದು ಸರಿ ಸುಮಾರು 1.40 ರ ಸಮಯದಲ್ಲಿ ಬಂದರು. ಸರ್ ಅದು ಎಂದು ಹೇಳಿದರು. ಆಗ ನಾನು ರಿಪೋರ್ಟ್ ರೆಡಿ ಆಗಲಿ ಸ್ಥಳ ಪರಿಶೀಲನೆ ನಡೆಸಿ ಕ್ರಮವಿಡುವುದಾಗಿ ತಿಳಿಸಿದೆ, ಆಗ ಅವರು ಡ್ರೈವರ್ ಎಂದು ಹೋಗಪ್ಪ ಎಂದು ತಿಳಿಸಿರುತ್ತಾರೆ. ಡ್ರೈವರ್ ಕಾಲ್ ಮಾಡಿದರು ನಾನು ಕೆಲಸದ ಒತ್ತಡ ಕಾರಣ ರಿಸೀವ್ ಮಾಡಿಲ್ಲ. ನಂತರ ಕೆಲಸ ಸಮಯದ ನಂತರ ನಾನೆ ಕಾಲ್ ಮಾಡಿದೆ ಆತ ರಿಸೀವ್ ಮಾಡಿಲ್ಲ. ಅವನೇ ನನ್ನ ಕಛೇರಿಗೆ ಬಂದರು. ಆಗ ಆ ವ್ಯಕ್ತಿ ಕೂಡ ಬಂದರು. ನಾನು ಏನು ಅಂದರೆ ಬರತಿರಾ ಸಾರ್ ಅಂದರು. ಹೋಗಪ್ಪ ಎಂದು ತಿಳಿಸಿ ನಾನು ಬೇರೆ ಕಡತ ಪರಿಶೀಲನೆಯಲ್ಲಿರುತ್ತೇನೆ. ಆ ಸಮಯದಲ್ಲಿ ಎ.ಸಿ.ಬಿ ಕಛೇರಿ ರವರು ಬಂದರು. ಕಡತ ಎತ್ತಿಕೊಂಡು ಟ್ರ್ಯಾಪ್ ಮಾಡಿರುವುದಾಗಿ ತಿಳಿಸಿರುತ್ತಾರೆ" ಎಂದು ಬರೆದುಕೊಟ್ಟಿರುತ್ತಾರೆ.**

11. ನಂತರ, ತನಿಖಾಧಿಕಾರಿಯವರು 2ನೇ ಎದುರುದಾರರನ್ನು ಕುರಿತು ಸಮಜಾಯಿಷಿ ನೀಡುವಂತೆ ಕೇಳಿದಾಗ, ಲಿಖಿತ ಸಮಜಾಯಿಷಿಯನ್ನು 2ನೇ ಎದುರುದಾರರು ಈ ಕೆಳಕಂಡಂತೆ ನೀಡಿರುತ್ತಾರೆ.

**"ನಾನು ನಗರಸಭೆ ಚನ್ನಪಟ್ಟಣದಲ್ಲಿ ಎಸ್.ಡಿ.ಎ ಆಗಿ ಸುಮಾರು ಒಂದೂವರೆ ವರ್ಷದಿಂದ ಕೆಲಸ ನಿರ್ವಹಿಸಿರುತ್ತೇನೆ. ಈ ದಿನಾಂಕ: 03/07/2019 ರಂದು ಪಯಾಜ್ ಮತ್ತು ಸಿದ್ದಿಕ್**

ಎಂಬುವರು ಬುರಾನುದ್ದಿನವರ ಆಳತೆ ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ ವಿಚಾರಿಸಿ ಬುರಾನುದ್ದಿನ್ ಕಡತ ಏನಾಗಿರುತ್ತದೆ ಎಂದು ವಿಚಾರಿಸಿದಾಗ ನಾನು ಸದರಿ ಕಡತವನ್ನು ಕಂದಾಯ ನಿರೀಕ್ಷಕರಿಗೆ ಕಳುಹಿಸಿರುತ್ತೇನೆ. ಅಲ್ಲಿ ವಿಚಾರಿಸಿ ಎಂದು ತಿಳಿಸಿರುತ್ತೇನೆ. ಅರ್ಜಿದಾರರು ಈ ಹಿಂದೆ ಬುರಾನುದ್ದಿನ್ ರವರು ಇ–ಖಾತೆ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿದಾರರಿಗೆ ಕರವಸೂಲಿಗಾರ ವರದಿ ಕಂದಾಯ ನಿರೀಕ್ಷಕರ ವರದಿ ಹಾಗೂ ಕಂದಾಯ ಅಧಿಕಾರಿಗಳ ಹಾಗೂ ಪೌರಾಯುಕ್ತರ ಆದೇಶದಂತೆ ಬುರಾನುದ್ದಿನವರ ಮಗ ಕಛೇರಿಯ ದಾಖಲೆಯಲ್ಲಿ ಇರುವಂತೆ ಇ–ತಂತ್ರಾಂಶದಲ್ಲಿ ನಮೂನೆ 3ನ್ನು ವಿತರಿಸಲಾಗಿದೆ. ಹಿಂದೆ ಪಯಾಜ್ ಮತ್ತು ಸಿದ್ದಿಕ್ ರವರು ಒಂದು ವಾರದ ಹಿಂದೆ ಬಂದು ಬುರಾನುದ್ದಿನ್ ರವರ ಅಳತೆ ತಿದ್ದುಪಡಿ ಬಗ್ಗೆ ವಿಚಾರಿಸಿದಾಗ ನಾನು ಬುನಾರುದ್ದಿನ್ ಅಳತೆ ತಿದ್ದುಪಡಿ ಕೊಟ್ಟಿರುವ ಅರ್ಜಿಯನ್ನು ಕಂದಾಯ ನಿರೀಕ್ಷಕರವರಿಗೆ ಕಳುಹಿಸಿರುತ್ತೇನೆ ಎಂದು ತಿಳಿಸಿದರು. ಪಯಾಜ್ ಮತ್ತು ಸಿದ್ದಿಕ್ ರವರು ನನ್ನ ಮೇಲೆ ಕೂಗಾಡಿ ಗಲಾಟೆ ಮಾಡಿದರು. ಆಗ ಪೌರಾಯುಕ್ತರು ಸಮಧಾನಪಡಿಸಿ ಕಡತವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ" ಎಂದು ಬರೆದುಕೊಟ್ಟಿರುತ್ತಾರೆ.

12. ನಂತರ, ತನಿಖಾಧಿಕಾರಿಯವರು ಶ್ರೀ ಡಿ.ಪ್ರಶಾಂತ ರವರನ್ನು ಕುರಿತು ಸಮಜಾಯಿಷಿ ನೀಡುವಂತೆ ಕೇಳಿದಾಗ, ಲಿಖಿತ ಸಮಜಾಯಿಷಿಯನ್ನು ಶ್ರೀ ಡಿ.ಪ್ರಶಾಂತ ರವರು ಈ ಕೆಳಕಂಡಂತೆ ನೀಡಿರುತ್ತಾರೆ.

"ನಾನು 8 ತಿಂಗಳಿಂದ ನಗರಸಭೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಪೌರಾಯುಕ್ತರ ಕಾರು ಚಾಲಕನಾಗಿ ಕೆಲಸ ನಿರ್ವಹಿಸಿರುತ್ತಿದ್ದೇನೆ. ದಿ: 03/7/2019 ರಂದು ಬೆಳಿಗ್ಗೆ ಕೆಲಸಕ್ಕೆ ಬಂದಿರುತ್ತೇನೆ. ಈ ದಿನ ಮದ್ಯಾಹ್ನ ಸಮಯದಲ್ಲಿ ಪೌರಾಯುಕ್ತರು, ನನ್ನ ಕರೆದು ಚನ್ನಪಟ್ಟಣ ವಾರ್ಡ್ 22ನೇ ನಿವಾಸಿಯಾದ ಸಿದ್ದಿಕ್ ಮತ್ತು ಫಯಾಜ್ ರವರು ಬಂದಿದ್ದು, ಅವರ ಜೊತೆಯಲ್ಲಿ ಹೋಗು ಅವರು ಹಣ ಕೊಡುತ್ತಾರೆ ತೆಗೆದುಕೊಂಡು ಬಾ ಅಂತ ಹೇಳಿದರು. ಅದರಂತೆ, ನಾನು ಸಿದ್ದಿಕ್ ಮತ್ತು ಪಯಾಜ್ ರವರ ಜೊತೆ ನಗರಸಭೆ ಕಛೇರಿಯಿಂದ ಹೊರಗಡೆ ಬಂದು ಕಾರ್ ಪಾರ್ಕಿಂಗ್ ಸ್ಥಳದಲ್ಲಿ ಸದರಿಯವರಿಂದ ಪೌರಾಯುಕ್ತರು ತಿಳಿಸಿದಂತೆ ಹಣವನ್ನು ಕೇಳಿ ಪಡೆದುಕೊಂಡಿರುತ್ತೇನೆ. ಪೌರಾಯುಕ್ತರಾದ ಪುಟ್ಟಸ್ವಾಮಿ ರವರ ನಿರ್ದೇಶನದಂತೆ ನಾನು ಅವರಿಂದ ಹಣ ಪಡೆದಿರುತ್ತೇನೆ. ನಂತರ ಪಡೆದ ಹಣವನ್ನು ನಾನು ಧರಿಸಿದ್ದ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟುಕೊಂಡಿರುತ್ತೇನೆ. ನಂತರ ಎಸಿಬಿ ಪೊಲೀಸರು ಬಂದು ನನ್ನನ್ನು ಟ್ರ್ಯಾಪ್ ಮಾಡಿರುತ್ತಾರೆ" ಎಂದು ಬರೆದುಕೊಟ್ಟಿರುತ್ತಾರೆ.

13. ನಂತರ, ತನಿಖಾಧಿಕಾರಿಯವರು 1 ಮತ್ತು 2ನೇ ಎದುರುದಾರರು ಹಾಗೂ ಶ್ರೀ ಡಿ.ಪ್ರಶಾಂತ ಇವರುಗಳು ಕೊಟ್ಟ ಲಿಖಿತ ಸಮಜಾಯಿಷಿಯ ಬಗ್ಗೆ ದೂರುದಾರರ, ಪಂಚ–1, ಮತ್ತು ಸಿದ್ದಿಕ್ ಇವರ ಅಭಿಪ್ರಾಯ ಕೇಳಲಾಗಿ, ಅವರು ಸದರಿಯವರು ನೀಡಿದ ಸಮಜಾಯಿಷಿಯನ್ನು ಅಲ್ಲಗಳೆದಿರುತ್ತಾರೆ. ನಂತರ, ತನಿಖಾಧಿಕಾರಿಯವರು ತನಿಖೆಯನ್ನು ಮುಂದುವರಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1 ಮತ್ತು 2ನೇ ಎದುರುದಾರರು ಮತ್ತು ಶ್ರೀ ಡಿ.ಪ್ರಶಾಂತ ಇವರುಗಳನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ದಿನಾಂಕ: 03/07/2019 ರಂದು ಮಧ್ಯಾಹ್ನ 14.15 ರಿಂದ ರಾತ್ರಿ 21.45 ಗಂಟೆಯವರೆಗೆ ರವರೆಗೆ ಟ್ರ್ಯಾಪ್ ಪಂಚನಾಮೆಯನ್ನು ಬರೆದಿರುತ್ತಾರೆ.

14. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎಸ್.ಎಂ.ಸಿದ್ದಿಕ್ ರವರುಗಳ ಮತ್ತು 1 ಮತ್ತು 2ನೇ ಎದುರುದಾರರ ಹಾಗೂ ಶ್ರೀ ಡಿ.ಪ್ರಶಾಂತ ಇವರುಗಳ ಧ್ವನಿಗೆ ಹಾಗೂ ಸದರಿಯವರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ, ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇಲ್ಲಿಗೆ ಕಳುಹಿಸಿರುತ್ತಾರೆ.

15. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ, ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

16. ಗೌರವಾನ್ವಿತರ ಆದೇಶದ ಅನ್ವಯ, ದಿನಾಂಕ: 30/07/2022ರಂದು 1 ಮತ್ತು 2ನೇ ಎದುರುದಾರರಿಂದ ಹಾಗೂ ಶ್ರೀ ಡಿ.ಪ್ರಶಾಂತ್ ಇವರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, 1 ಮತ್ತು 2ನೇ ಎದುರುದಾರರು ತನ್ನ ವಿವರಣೆಯನ್ನು ದಿ: 06/09/2022 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯಲ್ಲಿ 1ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದು, ದೂರುದಾರರಿಂದ ಇ-ಸ್ವತ್ತು ಖಾತೆ ನೀಡಲು 25,000/- ರೂ.ಗಳನ್ನು ಪಡೆದಿರುವುದಿಲ್ಲ. ದೂರುದಾರರು ಮತ್ತು ಎಸ್.ಎಂ.ಸಿದ್ದಕ್ ರವರು ತನ್ನನ್ನು ಭೇಟಿ ಮಾಡಿರುವುದಿಲ್ಲ, ಯಾವುದೇ ಸಂಭಾಷಣೆಯನ್ನು ಮುದ್ರಾಣ ಮಾಡಿಕೊಂಡಿರುವುದಿಲ್ಲ. ದೂರುದಾರರು ಸ್ವತ್ತಿನ ಮಾಲೀಕರಲ್ಲ. ಅಳತೆ ತಿದ್ದುಪಡಿ ಸ್ವತ್ತಿಗೆ ಸಂಬಂಧಿಸಿದಂತೆ, ಕರ ವಸೂಲಿಗಾರರು ಮತ್ತು ಹಿರಿಯ ಅಭಿಯಂತರರು ಸ್ಥಳಕ್ಕೆ ಭೇಟಿ ನೀಡಿ, ಕ್ರಯ ಪತ್ರದಲ್ಲಿ ಇದ್ದ ಆಸ್ತಿಯ ಅಳತೆ ಹಾಗೂ ಅನುಭವದಲ್ಲಿದ್ದ ಆಸ್ತಿ ಅಳತೆಗೆ ವ್ಯತ್ಯಾಸ ಇರುತ್ತದೆ ಎಂದು ವರದಿ ನೀಡಿದರಿಂದ, ಆ ಸಂಬಂಧವಾಗಿ ಹಿಂಬರಹ ನೀಡಿರುತ್ತದೆ. ತನ್ನ ವಿರುದ್ಧ ಸುಳ್ಳು ದೂರನ್ನು ಎ.ಸಿ.ಬಿ.ಗೆ ದೂರುದಾರರು ನೀಡಿರುತ್ತಾರೆ. ದಿ: 03/07/219 ರಂದು ದೂರುದಾರರು ತನ್ನನ್ನು ಭೇಟಿ ಮಾಡಿರುವುದಿಲ್ಲ. ತನ್ನ ಪರವಾಗಿ ಶ್ರೀ ಡಿ.ಪ್ರಶಾಂತ, ಇವರಿಗೆ ಹಣವನ್ನು ನೀಡಲು ದೂರುದಾರರಿಗೆ ಹೇಳಿರುವುದಿಲ್ಲ ಇತ್ಯಾದಿ ಅಂಶಗಳನ್ನು ತನ್ನ ಸಮಜಾಯಿಷಿಯಲ್ಲಿ ತಿಳಿಸಿ ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ. ಹಾಗಾಗಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಮುಂದುವರೆದು, 2ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ದೂರುದಾರರಿಂದ ಇ-ಸ್ವತ್ತು ಸಂಬಂಧವಾಗಿ 5000/- ರೂ. ಹಣವನ್ನು ತಾನು ಕೇಳಿರುವುದಿಲ್ಲ. ಸ್ವತ್ತಿನ ಮಾಲೀಕರಿಗೆ ತಿದ್ದುಪಡಿ ಕುರಿತು ಹಿಂಬರಹವನ್ನು ನೀಡಿರುತ್ತದೆ. ದೂರುದಾರರು ತನ್ನನ್ನು ಭೇಟಿ ಮಾಡಿರುವುದಿಲ್ಲ. ಸುಳ್ಳು ದೂರನ್ನು ತನ್ನ ವಿರುದ್ಧ ಎ.ಸಿ.ಬಿ. ಠಾಣೆಯಲ್ಲಿ ದಾಖಲಿಸಿರುತ್ತಾರೆ ಇತ್ಯಾದಿ ಅಂಶಗಳನ್ನು ತನ್ನ ಸಮಜಾಯಿಷಿಯಲ್ಲಿ ತಿಳಿಸಿ ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ. ಹಾಗಾಗಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗಾಗಿ ಇವರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ. ಮುಂದುವರೆದು, ಶ್ರೀ ಡಿ.ಪ್ರಶಾಂತ್ ಇವರು 1ನೇ ಎದುರುದಾರರ ಕಛೇರಿಯಲ್ಲಿ ಕಾರು ಚಾಲಕನ್ನಾಗಿ ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲೆಗಳು

ಲಭ್ಯವಿರುವುದಿಲ್ಲ. ಹಾಗಾಗಿ ಸದರಿಯವರು ಖಾಸಗಿ ವ್ಯಕ್ತಿಯಾಗಿ ಅಪರಾದ ಎಸಗಿರುವುದರಿಂದ, ಮಾನ್ಯರ ಆದೇಶದ ಮೇರೆಗೆ ಸದರಿಯವರನ್ನು ಇಲಾಖಾ ವಿಚಾರಣೆಯಿಂದ ಕೈಬಿಟ್ಟಿದೆ.

17. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, 1ನೇ ಎದುರುದಾರರಾದ ಶ್ರೀ ಸಿ.ಪುಟ್ಟಸ್ವಾಮಿ (ನಿವೃತ್ತಿ ದಿನಾಂಕ: 31-07-2029), ಪೌರಾಯುಕ್ತರು, ನಗರಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ, ರವರು ಹಾಗೂ ಶ್ರೀ ಡಿ.ಪ್ರಶಾಂತ ರವರ ಮೂಲಕ (ಖಾಸಗಿ ವ್ಯಕ್ತಿ) 15000/- ರೂ.ಗಳನ್ನು ಲಂಚವನ್ನು ಪಡೆದಿದ್ದು, ಮತ್ತು 2ನೇ ಎದುರುದಾರರಾದ ಶ್ರೀ ಟಿ.ಎಸ್.ಮೋಹನ್ ಕುಮಾರ್ (ನಿವೃತ್ತಿ ದಿನಾಂಕ: 30-08-2029), ದ್ವಿತೀಯ ದರ್ಜೆ ಸಹಾಯಕ, ನಗರಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ, ರವರು, ಫೈಲ್ ಕ್ಲಿಯರ್ ಆದ ನಂತರ, ಲಂಚದ ಹಣ ಪಡೆಯಲು ಒಪ್ಪಿದ್ದು, ತಮ್ಮ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಲಂಚದ ಹಣವನ್ನು ಪಡೆಯುವಲ್ಲಿ, ದುರ್ನಡತೆ ತೋರಿರುವುದರಿಂದ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

20/4/23

**(ನ್ಯಾಯಾಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು**
ಕರ್ನಾಟಕ ರಾಜ್ಯ, ಬೆಂಗಳೂರು